**ಓ.ಎಸ್ ನಂ. 32/2022 ಪಿ.ಡಬ್ಲ್ಯೂ-1**

**ಸಾಕ್ಷಿಯನ್ನು ದಿನಾಂಕ 1.8.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 1 ನೇ ಪ್ರತಿ ವಾದಿ ಪರ ಶ್ರೀ ಜಿ.ಎನ್.ಎನ್ ವಕೀಲರಿಂದಃ**

ನನಗೆ ಈಗ 70 ವರ್ಷ ವಯಸ್ಸಾಗಿರುತ್ತದೆ. 1 ನೇ ಪ್ರತಿವಾದಿ ನನ್ನ ಅಣ್ಣನಾಗಬೇಕು. ಅವರಿಗೆ ಈಗ 80 ವರ್ಷ ವಯಸ್ಸಾಗಿರುತ್ತದೆ. ನನ್ನ ತಂದೆ ತಾಯಿಗೆ ನಾನು ಮತ್ತು 1 ನೇ ಪ್ರತಿವಾದಿ ಮಾತ್ರ ಮಕ್ಕಳಾಗಿರುತ್ತೇವೆ. 1 ನೇ ಪ್ರತಿವಾದಿಯು ಬಿದರಹಳ್ಳಿ ಯಲ್ಲಿ ವಾಸವಾಗಿರುತ್ತಾರೆ. ನಾನು ಚಿಕ್ಕಬರಗಿಯಲ್ಲಿ 20 ವರ್ಷದಿಂದ ವಾಸವಾಗಿರುತ್ತೇನೆ. ನಾನು ಚಿಕ್ಕಬರಗಿಯಲ್ಲಿ 40-45 ವರ್ಷಗಳಿಂದ ವಾಸವಾಗಿರುತ್ತೇನೆ ಎಂದರೆ ಸರಿ. ಈ ದಾವೆ ದಾಖಲಿಸಲು ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನನ್ನ ತಂದೆಯ ತಾಯಿಯ ಹೆಸರು ವೀರಮ್ಮ ಆಗಿರುತ್ತದೆ. ನನ್ನ ದಾವಾ ಪತ್ರದಲ್ಲಿ ಅವರ ಹೆಸರು ನಿಂಗಮ್ಮ ಎಂದು ಬರೆಸಿರುವುದಿಲ್ಲ. ಗಿಡ್ಡಮ್ಮ ಎಂಬುವವರು ನನ್ನ ತಾಯಿ ಆಗಿರುತ್ತಾರೆ. ನನ್ನ ತಂದೆ ತಾಯಿ ನಾನು ಸಣ್ಣವನಿದ್ದಾಗ ತೀರಿಕೊಂಡಿರುತ್ತಾರೆ. ಎಷ್ಟು ವರ್ಷಗಳು ಆಗಿರುತ್ತದೆಂದು ಗೊತ್ತಿರುವುದಿಲ್ಲ. ನಾನು ಹೆಡಿಯಾಲದ ಹುಡುಗಿಯನ್ನು ನನಗೆ 25 ವರ್ಷ ವಯಸ್ಸಾಗಿದ್ದಾಗ ಮದುವೆ ಮಾಡಿಕೊಂಡಿರುತ್ತೇನೆ. ನಾನು ಚಿಕ್ಕಬರಗಿಯಲ್ಲಿ ಶೆಡ್ಡು ಹಾಕಿಕೊಂಡು ವಾಸವಾಗಿರುತ್ತೇನೆ. ನಾನು ಶೆಡ್ಡು ಹಾಕಿಕೊಂಡಿರುವ ಜಾಗವು ಪುಟ್ಟಹೆತ್ತಪ್ಪ ಎಂಬ ಹೆಸರಿನಲ್ಲಿ ಇರುತ್ತದೆ. ಅವರಿಗೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ. ನಾನು ಹಾಜರುಪಡಿಸಿರುವ ನಿಪಿ 3 ಮತ್ತು 4 ಪಹಣಿಯ ಹೆಸರುಗಳು ಯಾವಾಗ ಬದಲಾವಣೆ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಆ ರೀತಿ ಖಾತೆ ಬದಲಾವಣೆ ಆಗಿರುವ ವಿಚಾರ ಯಾವಾಗ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿದಾರರು ಖಾತೆ ಬದಲಾವಣೆ ಆಗಿರುವ ವಿಚಾರ ಗೊತ್ತಿರುವುದಿಲ್ಲ ಎನ್ನುವರು. ದಾವಾ 3 ನೇ ಐಟಂ ಆಸ್ತಿಯಲ್ಲಿ ಭೂ ಸ್ವಾಧೀನ ಆಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಭೂ ಸ್ವಾಧೀನ ಪರಿಹಾರವನ್ನು ಯಾರು ಪಡೆದುಕೊಂಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ನಾನು 50 ವರ್ಷಗಳ ಹಿಂದಿನಿಂದಲೂ ದಾವಾ ಆಸ್ತಿಗಳಲ್ಲಿ ಪಾಲು ಕೊಡಿ ಎಂದು 1 ನೇ ಪ್ರತಿವಾದಿಯ ಬಳಿ ಕೇಳುತ್ತಾ ಬಂದಿರುತ್ತೇನೆ. ದಾವಾ ಆಸ್ತಿಗಳಲ್ಲಿ 1 ನೇ ಪ್ರತಿವಾದಿಯು ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾನೆ ಎಂದರೆ ಸಾಕ್ಷಿದಾರರು ನಾನು ಸಹ ವ್ಯವಸಾಯ ಮಾಡುತ್ತಿದ್ದೇನೆ ಎನ್ನುವರು. ನಾನು ದಾವಾ ಆಸ್ತಿಗಳಲ್ಲಿ ವ್ಯವಸಾಯ ಮಾಡುವ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ. ದಾವಾ ಆಸ್ತಿಗಳು 1 ನೇ ಪ್ರತಿವಾದಿ ವಾಸ ಮಾಡುತ್ತಿರುವ ಬಿದರಹಳ್ಳಿಯ ಅಕ್ಕಪಕ್ಕದಲ್ಲಿ ಇರುತ್ತದೆ ಎಂದರೆ ಸರಿ. ನಾನು ವಾಸವಾಗಿರುವ ಊರಿಗೂ ಬಿದರಹಳ್ಳಿಗೂ ಎಷ್ಟು ದೂರ ಇರುತ್ತದೆಂದು ನನಗೆ ಹೇಳಲು ಸಾಧ್ಯವಿಲ್ಲ. ದಾವಾ ಆಸ್ತಿಗಳ ಸರ್ವೆ ನಂ. ಮತ್ತು ಚೆಕ್ಕುಬಂದಿ ನನಗೆ ಗೊತ್ತಿರುವುದಿಲ್ಲ, ಸಾಕ್ಷಿದಾರರು ಮುಂದುವರೆದು ನಾನು ವಿದ್ಯಾವಂತ ಅಲ್ಲ ಎನ್ನುವರು. ನನ್ನ ತಂದೆ ತಾಯಿಯ ಶವ ಸಂಸ್ಕಾರವನ್ನು 1

ನೇ ಪ್ರತಿವಾದಿಯು ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ನಾನು ಸಹ ಮಾಡಿರುತ್ತೇನೆ ಎನ್ನುವರು. ನನ್ನ ತಂದೆ ತಾಯಿಯ ಶವ ಸಂಸ್ಕಾರವನ್ನು ಬಿದರಹಳ್ಳಿಯಲ್ಲಿ ಮಾಡಲಾಗಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ತಂದೆ ತಾಯಿ ನನ್ನ ಜೊತೆ ಇದ್ದರು ಎನ್ನುವರು. ನಿಪಿ 7 ರ ಪ್ರಕಾರ ನನ್ನ ತಾಯಿ 1975 ರಲ್ಲಿ ತೀರಿಕೊಂಡಿರುತ್ತಾರೆಂದು ನಮೂದು ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ತಾಯಿಯ ತಾಯಿಯ ಹೆಸರು ನನಗೆ ಗೊತ್ತಿರುವುದಿಲ್ಲ. ನಿಪಿ 7 ರಲ್ಲಿ ನನ್ನ ತಾಯಿಯ ತಾಯಿಯ ಹೆಸರು ಬರೆದಿರುವುದಿಲ್ಲ ಎಂದರೆ ಸರಿ. ನಿಪಿ 7 ನ್ನು ನಾನು ಯಾವಾಗ ಪಡೆದುಕೊಂಡಿರುತ್ತೇನೆಂದು ನನಗೆ ಗೊತ್ತಿರುವುದಿಲ್ಲ. ನಾನು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ನ್ಯಾಯಾಲಯದ ಆದೇಶದ ಪ್ರಕಾರ ನಿಪಿ 7 ನ್ನು ಪಡೆದುಕೊಂಡಿರುತ್ತೇನೆಂದರೆ ಸರಿಯಲ್ಲ. ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು ಆಗಿರುವುದಿಲ್ಲ. ಸಾಕ್ಷಿದಾರರಿಗೆ ದಿನಾಂಕಃ 17.01.1982 ರ ಹಕ್ಕು ನಿವೃತ್ತಿ ಪತ್ರವನ್ನು ಸಾಕ್ಷಿಗೆ ತೋರಿಸಲಾಗಿರುತ್ತದೆ. ಸದರಿ ದಾಖಲೆಯ ಪ್ರಕಾರ ಬಿದರಹಳ್ಳಿ ಗ್ರಾಮದ ಸರ್ವೆ ನಂ. 22 ರಲ್ಲಿ 1 ಎಕರೆ 17 ಗುಂಟೆ ಮತ್ತು ಸರ್ವೆ ನಂ. 55/1, 55/2 ರಲ್ಲಿ ಒಟ್ಟು 3 ಎಕರೆ 14 ಗುಂಟೆ ಜಮೀನನ್ನು ಹಣ ಪಡೆದುಕೊಂಡು 1 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂ. 55/1, 55/2 ರ ಜಮೀನನ್ನು ಮಲ್ಲೇಗೌಡ ಎಂಬುವವರಿಗೆ ನಾನು ಭೋಗ್ಯ ಮಾಡಿದ್ದು ಸದರಿ ಭೋಗ್ಯವನ್ನು ನಾನೇ ಬಿಡಿಸಬೇಕೆಂದು ಸದರಿ ದಾಖಲೆಯಲ್ಲಿ ಬರೆಯಲಾಗಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಸದರಿ ದಾಖಲೆಯಲ್ಲಿ ಮೇಲೆ ಹೇಳಿದ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ಬರೆದುಕೊಟ್ಟ ದಿನದಿಂದಲೂ 1 ನೇ ಪ್ರತಿವಾದಿಯು ಮೇಲೆ ಹೇಳಿದ ಆಸ್ತಿಗಳಲ್ಲಿ ಸ್ವಾಧೀನವಿದ್ದು ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ 2 ನೇ ಐಟಂ ಆಸ್ತಿಯು ಹಿಂದೆ ನನ್ನ ತಾಯಿಯ ಹೆಸರಿನಲ್ಲಿ ಇತ್ತು ಎಂದರೆ ಸರಿ. ದಾವಾ 4 ನೇ ಐಟಂ ಆಸ್ತಿಯು 1 ನೇ ಪ್ರತಿವಾದಿಗೆ ಸರ್ಕಾರದಿಂದ ಮಂಜೂರು ಆಗಿರುವ ಜಮೀನು ಎಂದರೆ ಸಾಕ್ಷಿದಾರರು ಒಟ್ಟು ಕುಟುಂಬದ ಪರವಾಗಿ ಮಂಜೂರು ಆಗಿರುತ್ತದೆ ಎನ್ನುವರು. ದಾವಾ 3 ನೇ ಐಟಂ ನ ಆಸ್ತಿಯು 1 ನೇ ಪ್ರತಿವಾದಿಯ ಹೆಸರಿಗೆ ಎಂ. ಆರ್ ನಂ. 2/1997-98 ರಂತೆ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಈ ಹಿಂದೆ 1 ನೇ ಪ್ರತಿವಾದಿಯಿಂದ ಹಣ ಪಡೆದುಕೊಂಡು ದಾವಾ 1 ಮತ್ತು 2 ನೇ ಐಟಂ ನ ಆಸ್ತಿಗಳನ್ನು 1 ನೇ ಪ್ರತಿವಾದಿ ಬಿಟ್ಟು ಕೊಟ್ಟಿದ್ದು ಎಂದಿಗೂ ನಾನು ಸದರಿ ಆಸ್ತಿಗಳ ಸ್ವಾಧೀನದಲ್ಲಿ ಇರಲಿಲ್ಲ, ವ್ಯವಸಾಯ ಮಾಡುತ್ತಿಲ್ಲ, ನಾನು ಚಿಕ್ಕಬರಗಿಯಲ್ಲಿಯೇ ವಾಸವಾಗಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಅವಿದ್ಯಾವಂತ ನಾಗಿದ್ದು ನಾನು ಬರೆದುಕೊಟ್ಟ ಹಕ್ಕು ನಿವೃತ್ತಿಯ ಪ್ರಕಾರ ಅವರ ಹೆಸರಿಗೆ ಖಾತೆ ಮಾಡಿಕೊಳ್ಳದೇ ಇದ್ದುದರಿಂದ ಅದನ್ನು ದುರುಪಯೋಗ ಪಡಿಸಿಕೊಂಡು ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ 3 ನೇ ಐಟಂ ಆಸ್ತಿಗಳು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ 3 ನೇ ಐಟಂ ನ ಆಸ್ತಿಯ ಖಾತೆಯು 1997 ರಲ್ಲಿ 1 ನೇ ಪ್ರತಿವಾದಿಯ ಹೆಸರಿಗೇ ಆಗಿದ್ದು ಸದರಿ ವಿಚಾರ ನನಗೆ

ಗೊತ್ತಿದ್ದರೂ ಸಹ ಈಗ ಕಾನೂನು ಬಾಹಿರವಾಗಿ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು 40 ವರ್ಷಗಳಿಂದ ಚಿಕ್ಕಬರಗಿಯಲ್ಲಿ ವಾಸವಾಗಿದ್ದು ದಾವಾ ಆಸ್ತಿಗಳಲ್ಲಿ ಜಂಟಿ ಸ್ವಾಧೀನದಲ್ಲಿ ಇರುವುದಿಲ್ಲ ಮತ್ತು ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಓ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.